ಅನುವಾದಿತ ಕತೆ

# ಕಲ್ಲಿನ ತೊಟ್ಟಿ



ತಮಿಳು ಮೂಲ: ಪಾವಣ್ಣನ್
ಕನ್ನಡಕ್ಕೆ: ಕೆ. ನಲ್ಲತಂಬಿ

ಹಾಲಿನ ಲೆಕ್ಕ ಬರೆದುಕೊಳ್ಳುವುದು ನನ್ನ ಬೆಳಗಿನ ಕೆಲಸಗಳಲ್ಲಿ ಒಂದು. ಅದು ನನ್ನ ಅಪ್ಪನಿಗೆ ಬಹಳ ಇಷ್ಟ. ನನಗೂ ಇಷ್ಟವೆ. ಆದರೆ ಅಮ್ಮನಿಗೇಕೋ ಹಿಡಿಸುವುದಿಲ್ಲ. "ಓದೋ ಹುಡುಗನ್ನ ಇದರಲ್ಲಿ ಸಿಕ್ಕಿಸಿ ಹಾಳುಮಾಡ್ಬೇಡಾಂತ ಹೇಳಿದ್ರೆ ಕಿವಿಗೆ ಹಾಕ್ಕೊಳ್ಳಲ್ಲ. ನಾಲ್ಕು ಅಕ್ಷರ ಕಲಿತ್ರಲ್ವೆ ಒಳ್ಳೆ ದಾರಿ ಹಿಡಿಯೋಕ್ಕೆ ಸಾಧ್ಯ?" ಎಂದು ಸಮಯ ಸಿಗುವಾಗಲೆಲ್ಲ ಗೊಣಗುತ್ತಲೇ ಇರುತ್ತಾಳೆ. ತಕ್ಷಣ ಅಪ್ಪ "ಬಾಯ್ ಮುಚ್ಕೊಂಡು ಸಗಣಿ ಬಾಚು ಹೋಗು. ಊರು ಲೋಕ ತಿರುಗಿ ನೋಡ್ದವಳಂಗೆ ಬುದ್ಧಿ ಹೇಳಕ್ ಬರ್ಬೇಡಾ, ಯಾವ್ದು ಒಳ್ಳೆದು, ಯಾವ್ದು ಕೆಟ್ಟದು ಅಂತ ಎಲ್ಲಾ ನನಗೆ ಗೊತ್ತು" ಎಂದು ಗದರಿಸಿಬಿಡುತ್ತಾರೆ. ಈ ಸಂಭಾಷಣೆಗಳು ಯಾವುದೂ ನನ್ನ ಕಿವಿಗೇ ಬೀಳಲಿಲ್ಲ ಎಂಬಂತೆ ನಾನು ಗಿರಾಕಿಗಳಿಗೆ ಹಾಲು ಸುರಿದು ಲೆಕ್ಕ ಬರೆಯುವುದರಲ್ಲಿ ಮುಳುಗಿಹೋಗುತ್ತೇನೆ.